INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July-August, 2025
PageNo,-116-123
Peer -Reviewed, Refereed Journal

# ಸರಜೂ ಕಾಟ್ಕರ್ ಅವರ ಕಾದಂಬರಿ 'ಸಾವಿತ್ರಿಬಾಯಿ ಫುಲೆ'

*.ದಿವ್ಯಶ್ರೀ ಎಸ್.[1]
**.ಪ್ರೊ.ವಿಜಯಕುಮಾರಿ ಎಸ್.ಕರಿಕಲ್.[2]

ಕನ್ನಡ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರಾಗಿರುವ ಸರಜೂ ಕಾಟ್ಕರ್ ಅವರು ಸಮಕಾಲೀನ ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅನನ್ಯವಾಗಿದೆ ಸರಜೂ ಕಾಟ್ಕರ್ ಅವರು ಆಗಸ್ಟ್ 14, 1953ರಂದು ಹುಬ್ಬಳ್ಳಿಯಲ್ಲಿ ಜನಿಸಿದರು. ತಂದೆ ಹನುಮಂತರಾವ್, ತಾಯಿ ಗೌರಾಬಾಯಿ. ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಮತ್ತು ಅದೇ ವಿಶ್ವವಿದ್ಯಾಲಯದಿಂದ 'ಕನ್ನಡ–ಮರಾಠಿ ದಲಿತ ಸಾಹಿತ್ಯ : ಒಂದು ಅಧ್ಯಯನ' ಎಂಬ ವಿಷಯದಲ್ಲಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಪತ್ರಿಕೆ ಮತ್ತು ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ತಮ್ಮನ್ನು ತೊಡಗಿಸಿಕೊಂಡ ಇವರು ಮೂಲತಃ ಮರಾಠಿ ಭಾಷಿಕ ಕುಟುಂಬದಲ್ಲಿ ಜನಿಸಿದ ಕಾಟ್ಕರ್ ಕನ್ನಡ ಭಾಷೆಯಲ್ಲಿ ಮಾಡಿದ ಸಾಧನೆ ಹೆಮ್ಮೆ ಪಡುವಂತಹದ್ದು. ಜೊತೆಗೆ ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಪ್ರಬುದ್ಧತೆಯನ್ನು ಪಡೆದಿದ್ದಾರೆ. ಬಂಡಾಯದ ಹಿನ್ನಲೆಯಿಂದ ಬಂದ ಲೇಖಕರು ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ನಡೆಸಿದ್ದಾರೆ. ಕವನಸಂಕಲನ, ಕಥೆ, ನಾಟಕ, ಕಾದಂಬರಿ ಅನುವಾದಿತ ಕೃತಿಗಳ ಮೂಲಕ ಸಾಹಿತ್ಯ ಲೋಕಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಬೆಂಕಿ–ನೀರು, ಹಸಿದ ನೆಲ, ನೆಲದ ನೆರಳು, ಸೂರ್ಯ, ಏಕಾಂತದ ಮನುಷ್ಯ, ಝೂನ್ ವೀರ ಮುಂತಾದ ಕವನಸಂಕಲನಗಳು, ದೇವರಾಯ, ಜುಲೈ 22, 1947, ಬಾಜೀರಾಯ ಮಸ್ತಾನಿ, ಸಾವಿತ್ರಿಬಾಯಿಫುಲೆ, ಗೌರೀಪುರ, ದಂಗೆ ಎಂಬ ಕಾದಂಬರಿಗಳು ಮತ್ತು ಅಂಬೇ ಎಂಬ ನಾಟಕ. ಒಂದೂರಿನಲ್ಲಿ ಒಬ್ಬ ರಾಜನಿದ್ದ ಎಂಬ ಅನುವಾದಿತ ಕಾದಂಬರಿ ಇತರೆ ಕೃತಿಗಳನ್ನು ರಚಿಸಿದ್ದಾರೆ.

ಸರಜೂ ಕಾಟ್ಕರ್ ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಅನುವಾದ ಸಾಹಿತ್ಯ ಪ್ರಶಸ್ತಿ, ಜಿ.ಎಸ್.ಎಸ್ ಕಾವ್ಯ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ. ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಿರಿಗನ್ನಡ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

---

[1]. ಸಂಶೋಧನಾ ವಿದ್ಯಾರ್ಥಿನಿ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
[2] .ಪ್ರಾಧ್ಯಾಪಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಭಾರತದಲ್ಲಿ ಶತಶತಮಾನಗಳಿಂದಲೂ ಅಟ್ಟಹಾಸದಿಂದ ಮೆರೆಯುತ್ತಿರುವ ಅಮಾನವೀಯ ಆಚರಣೆಯೆಂದರೆ ಜಾತಿಪದ್ಧತಿ, ಅಸ್ಪೃಶ್ಯತೆ ಮತ್ತು ಅಸಮಾನತೆ. ಇದಕ್ಕೆ ಮುಖ್ಯಕಾರಣ ಅವೈಚಾರಿಕ ಮತ್ತು ಅವೈಜ್ಞಾನಿಕತೆಯ ಚಾತುರ್ವರ್ಣ ವ್ಯವಸ್ಥೆ. ಇಂತಹ ಸಂದರ್ಭದಲ್ಲಿ ಈ ವ್ಯವಸ್ಥೆಯ ವಿರುದ್ಧ ದನಿಯೆತ್ತಿ ಸಮಾಜ ಪರಿವರ್ತನೆಗೆ ಹಲವಾರು ಸಮಾಜ ಸುಧಾರಕರು ಶ್ರಮವಹಿಸಿದ್ದಾರೆ. "ನಮ್ಮ ಸಮಾಜವನ್ನು ಸರಿಪಡಿಸಲು ಬೇರೆ ಬೇರೆ ಕ್ಷೇತ್ರದ ಅಸಂಖ್ಯ ಸಂವೇದನಾಶೀಲರು ಶಕ್ತಿಮೀರಿ ಪ್ರಯತ್ನಿಸಿರುವುದು ತಿಳಿದುಬರುತ್ತದೆ. ನಮಗೆ ತಿಳಿದಿರುವ ಹಾಗೆ ಮಹಾತ್ಮ ಬುದ್ಧ ಈ ದಿಕ್ಕಿನ ಸಂಘಟನಾತ್ಮಕ ಪ್ರಯತ್ನಕ್ಕೆ ಅಡಿಗಲ್ಲು ಹಾಕಿದವರಲ್ಲಿ ಮೊದಲಿಗರು. ಬುದ್ಧನಿಂದ ಆರಂಭವಾದ ಸಮಾಜ ಬದಲಾವಣೆಯ ಹೋರಾಟ ಇನ್ನೂ ಕೂಡ ಬಂಡೆಗಳಡಿಯ ಕಿರುತೊರೆಯ ಹಾಗೆ ಹರಿಯುತ್ತಲೇ ಸಾಗಿದೆ. ಅಂಥ ಅವಿಶ್ರಾಂತ ಹೋರಾಟದಲ್ಲಿ ಸಾಹಿತ್ಯಲೋಕದ ಪಾಲುದಾರಿಕೆ ಕೂಡ ಇದೆ. ಶತಮಾನಕ್ಕೊಬ್ಬರಂತೆ ಜೀವಪರ ಸಂವೇದನಾಶೀಲರು ಈ ಸಮಾಜದ ಚಲನೆಗೆ ತಮ್ಮದೇ ಆದ ರೀತಿಯಲ್ಲಿ ಶ್ರಮಿಸುತ್ತಾ ಬಂದಿರುವುದನ್ನು ಚರಿತ್ರೆಯ ಓದಿನಿಂದ ತಿಳಿಯಬಹುದು".[1]

ಮನುಷ್ಯ–ಮನುಷ್ಯರ ನಡುವೆ ಶೋಷಣೆ, ಮೇಲು–ಕೀಳು ಎಂಬ ಭೇದ–ಭಾವ ಅಸ್ಪೃಶ್ಯತೆ ಆಚರಣೆ, ಜಾತಿಪದ್ಧತಿ, ಮೌಢ್ಯತೆ, ಅಸಮಾನತೆ ತಾಂಡವವಾಡುತ್ತಿದ್ದು ಪ್ರಸ್ತುತ ಸಂದರ್ಭದಲ್ಲೂ ಕೂಡ ದಲಿತರು ಮನುಷ್ಯರಾಗಿ, ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗಿಲ್ಲ. ಇಂತಹ ವ್ಯವಸ್ಥೆಯ ವಿರುದ್ಧ, ಶೋಷಣೆಯ ವಿರುದ್ಧ ಹಲವಾರು ಮಹಾನ್ ವ್ಯಕ್ತಿಗಳು ಹೋರಾಟ ನಡೆಸಿದ್ದಾರೆ. ಇಂತಹವರ ಸಾಲಿನಲ್ಲಿ ಬುದ್ಧ, ಬಸವಣ್ಣ, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಅಂಬೇಡ್ಕರ್, ಲೋಹಿಯ, ಪೆರಿಯಾರ್, ಕಾರ್ಲ್‌ಮಾರ್ಕ್ಸ್, ನಾರಾಯಣಗುರು, ಶಾಹುಮಹಾರಾಜ, ನಾಲ್ವಡಿ ಕೃಷ್ಣರಾಜ ಒಡೆಯರ್ ಮೊದಲಾದವರು ದೇಶದ ಶೋಷಿತರ ಏಳಿಗೆಗಾಗಿ ಶ್ರಮಿಸಿದ್ದಾರೆ. ಜಾತಿರಹಿತ, ವರ್ಗರಹಿತ, ಲಿಂಗರಹಿತ ಸಮಾಜದ ನಿರ್ಮಾಣಕ್ಕೆ ಶ್ರಮಿಸಿ ಹೋರಾಡಿದವರು ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ. ಸಮಾಜದ ಅಹಿತಕರವಾದ ವ್ಯವಸ್ಥೆಯ ವಿರುದ್ಧ ಹೋರಾಡಿದವರು ಫುಲೆ ದಂಪತಿಗಳು. ಇವರ ಕುರಿತು ತಿಳಿಯುವುದು ಭಾರತಿಯರಿಗೆ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ 2016ರಲ್ಲಿ ಲೇಖಕರಾದ ಸರಜೂ ಕಾಟ್ಕರ್ ಅವರು ಬರೆದಿರುವ ಕಾದಂಬರಿ 'ಸಾವಿತ್ರಿಬಾಯಿ ಫುಲೆ' ಪ್ರಮುಖವಾಗಿದೆ.

'ಸಾವಿತ್ರಿಬಾಯಿ ಫುಲೆ' 19ನೇ ಶತಮಾನದಲ್ಲಿ ಭಾರತದ ಸಂದರ್ಭದಲ್ಲಿ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಬಹುದೊಡ್ಡ ಕ್ರಾಂತಿಯನ್ನು ಉಂಟುಮಾಡಿದ ಆಧುನಿಕ ಭಾರತದ ಮೊದಲ ಶಿಕ್ಷಕಿ, ಸಮಾಜ ಸುಧಾರಕಿ ಸಾವಿತ್ರಿಬಾಯಿ ಫುಲೆ ಅವರ ಜೀವನ ಮತ್ತು ಸಾಧನೆಗಳನ್ನು ಕುರಿತ ಕಾದಂಬರಿಯಾಗಿದೆ. ಆಧುನಿಕ ಭಾರತದ ಮಹಾನ್ ಸಮಾಜ ಸುಧಾರಕ, ಸಾಮಾಜಿಕ ನ್ಯಾಯದ ಹರಿಕಾರ, ಸಮಾನತೆಯ ಪ್ರತಿಪಾದಕ ಮಹಾತ್ಮ ಜ್ಯೋತಿಬಾ ಫುಲೆ ಅವರ ಪತ್ನಿ ಸಾವಿತ್ರಿಬಾಯಿ ಫುಲೆ.

ಇವರು ಆಧುನಿಕ ಭಾರತದ ಮೊದಲ ಮಹಿಳಾ ಶಿಕ್ಷಕಿ ಮತ್ತು ಸಮಾಜ ಸುಧಾರಕಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಸಾವಿತ್ರಿಬಾಯಿ ಫುಲೆ ಅವರ ಜೀವನ ಮತ್ತು ಸಾಧನೆಗಳನ್ನು ಕುರಿತ ಕಾದಂಬರಿ ಇದಾಗಿದೆ.

'ಸಾವಿತ್ರಿಬಾಯಿ ಫುಲೆ' ಕಾದಂಬರಿಯನ್ನು ಸರಜೂ ಕಾಟ್ಕರ್ ಅವರು ಬರೆದಿದ್ದಾರೆ. ಇದು 'ಸಾವಿತ್ರಿಬಾಯಿ ಫುಲೆ' ಅವರ ಜೀವನ, ವ್ಯಕ್ತಿತ್ವ, ಹೋರಾಟ, ಸಾಧನೆ ಮತ್ತು ಕೊಡುಗೆಗಳನ್ನು ಕುರಿತು ಸಂಶೋಧನಾತ್ಮಕವಾದ ಐತಿಹಾಸಿಕ ಕಾದಂಬರಿ. ಇದೊಂದು ಸವಾಲಿನ ಕೆಲಸವಾಗಿದೆ. ಇಂಥದ್ದೊಂದು ಮಹಾನ್ ಕಾರ್ಯದಲ್ಲಿ ಲೇಖಕರಾದ ಸರಜೂ ಕಾಟ್ಕರ್ ಅವರು ಶ್ರಮ ಗಮನಾರ್ಹವಾಗಿದೆ. "ಕನ್ನಡದಲ್ಲಿ ಚಾರಿತ್ರಿಕ ಕಾದಂಬರಿಗಳು ವಿರಳವಾಗುತ್ತಿರುವ ಸಂದರ್ಭದಲ್ಲಿ ಡಾ. ಸರಜೂ ಕಾಟ್ಕರ್ ಅವರ 'ಸಾವಿತ್ರಿಬಾಯಿ ಫುಲೆ' ಪ್ರಕಟಗೊಳ್ಳುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಈ ಸಾವಿತ್ರಿಬಾಯಿ ಫುಲೆ ಬೇರೆ ಬೇರೆ ಯಾರೂ ಅಲ್ಲ. ಮಹಾತ್ಮ ಫುಲೆ ಅವರ ಮಡದಿ. ಈವರೆಗೆ ಮಹಾತ್ಮ ಫುಲೆಯವರ ಜೀವನ ಕಾರ್ಯದ ಕುರಿತು ಹಲವಾರು ಗ್ರಂಥಗಳು ಮರಾಠಿಯಲ್ಲಿ, ಕನ್ನಡದಲ್ಲಿ ಬಂದಿವೆ. ಕಾದಂಬರಿಯಂತಹ ಸೃಜನಶೀಲ ರೂಪದಲ್ಲಿ ಬಂದಿರುವುದು. ತೀರಾ ಅಪರೂಪ"[2] ಎಂಬುದು ಲೇಖಕರಾದ ಚಂದ್ರಕಾಂತ ಪೋಕಳೆ ಅವರ ಮಾತನ್ನು ಇಲ್ಲಿ ಗಮನಿಸಬಹುದಾಗಿದೆ.

"ಸಾವಿತ್ರಿಬಾಯಿಯನ್ನು ಮಹಾತ್ಮ ಜ್ಯೋತಿಬಾ ಫುಲೆಯವರ ನೆರಳಾಗಿ, ಹಿಂಬಾಲಕಳಾಗಿ ಅನುಯಾಯಿಯಾಗಿ ಹಲವು ಚರಿತ್ರಾಕಾರರು ಚಿತ್ರಿಸಿರುವುದನ್ನು ಕಾಣತ್ತೇವೆ. ಸಾವಿತ್ರಿಬಾಯಿ ಫುಲೆಯ ಬಗೆಗೆ ಬರೆಯಲು ಹೊರಟಾಗ ಮತ್ತೆ ಮತ್ತೆ ಮಹಾತ್ಮ ಜ್ಯೋತಿಬಾ ಫುಲೆಯವರ ಸಾಧನೆ, ವ್ಯಕ್ತಿತ್ವವನ್ನೇ ಬಳಸಿಕೊಳ್ಳಬೇಕಾಗುತ್ತದೆ. ಆಗ ಫುಲೆಯವರ ಪ್ರಭಾವಲಯದ ಎದುರಿಗೆ ಸಾವಿತ್ರಿಬಾಯಿ ಮಸಕಾಗಿ ಬಿಡುವ ಬಿಕ್ಕಟ್ಟು ಎದುರಿಸಬೇಕಾಗುತ್ತದೆ"[3] ಎಂಬ ಚಂದ್ರಕಾಂತ ಪೋಕಳೆ ಅವರ ಮಾತು ಇಲ್ಲಿ ಗಮನಾರ್ಹ. ಜ್ಯೋತಿಬಾ ಫುಲೆ, ಮತ್ತು ಸಾವಿತ್ರಿಬಾಯಿ ಫುಲೆ ಅವರು ಆದರ್ಶ ದಂಪತಿಗಳು. ಒಬ್ಬರನೊಬ್ಬರನ್ನು ಬೇರ್ಪಡಿಸಿ ಹೇಳುವುದು ಅಸಾಧ್ಯದ ಸಂಗತಿ. ಆದರೂ ಕೂಡ ಅಂಥದ್ದೊಂದು ಸವಾಲನ್ನು ಸ್ವೀಕರಿಸಿ ಕಾದಂಬರಿ ರಚಿಸಿರುವುದು ಮಹತ್ವದ ಸಂಗತಿ. ಲೇಖಕರಾದ ಸರಜೂ ಕಾಟ್ಕರ್ ಅವರು ಸಾವಿತ್ರಿಬಾಯಿ ಫುಲೆ ಅವರ ಬಗೆಗೆ ಆಳವಾದ ಅಧ್ಯಯನ ನಡೆಸಿ ಕಾದಂಬರಿ ರೂಪದಲ್ಲಿ ದಾಖಲಿಸಿರುವುದು ಸ್ತುತ್ಯರ್ಹ.

ಚರಿತ್ರೆ ಮತ್ತು ಕಲ್ಪನೆಯ ನಡುವೆ ಇರುವ ವ್ಯತ್ಯಾಸವನ್ನು ಮನವರಿಕೆ ಮಾಡಿಕೊಂಡು ಚರಿತ್ರೆಗೆ ಸೃಜನಶೀಲತೆಯ ಸ್ಪರ್ಶವನ್ನು ನೀಡಿ ಕಾದಂಬರಿಗೆ ಹೊಸ ರೂಪವನ್ನು ಲೇಖಕರು ನೀಡಿದ್ದಾರೆ. ಹಾಗಾಗಿ ಈ ಕಾದಂಬರಿ ಸೃಜನಶೀಲ ಕಲಾಕೃತಿಯಾಗಿ ಹೊರಹೊಮ್ಮಿದೆ. ಸಮಕಾಲೀನ ಸಂದರ್ಭದಲ್ಲಿ ಸಾವಿತ್ರಿಬಾಯಿ ಫುಲೆ ಅವರ ಜೀವನ, ವ್ಯಕ್ತಿತ್ವ ಮತ್ತು ಸಾಧನೆಗಳನ್ನು ವಿವಿಧ ದೃಷ್ಟಿಕೋನಗಳಿಂದ ಈ

ಕಾದಂಬರಿ ಕಟ್ಟಿಕೊಡುತ್ತದೆ. ಈ ಕಾದಂಬರಿಯನ್ನು ಶುದ್ಧ ಚಾರಿತ್ರಿಕ ಸಂದರ್ಭವನ್ನು ಬಳಸಿ ಬರೆಯಲಿಲ್ಲ. ಚರಿತ್ರೆ ಮತ್ತು ಕಲ್ಪನೆಯನ್ನು ಪ್ರಮಾಣದಲ್ಲಿ ಬೆರೆಸಿ ಹದವಾದ ಸೃಜನಶೀಲದ ಪರಿಪಾಕವನ್ನು ನೀಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ ಎಂದು ಚಂದ್ರಕಾಂತ ಪೋಕಳೆಯವರ ಮಾತಿನಂತೆ ಇದೊಂದು ಸೃಜನಶೀಲ ಕಾದಂಬರಿಯಾಗಿ ಯಶಸ್ವಿಯಾಗಿದೆ ಎಂದು ಹೇಳಬಹುದು.

ಸರಜೂ ಕಾಟ್ಕರ್ ಅವರು ಸೃಷ್ಟಿಸಿರುವ ಸಾವಿತ್ರಿ ದಿಟ್ಟವಾಗಿ, ನೇರವಾಗಿ, ನಿರ್ಭೀಡೆಯಿಂದ ವರ್ತಿಸುವ ಧೀಮಂತ ಪಾತ್ರವಾಗಿದೆ. ಈ ಕಾದಂಬರಿಯಲ್ಲಿನ ಸಾವಿತ್ರಿ ಅನ್ಯಾಯವನ್ನು ಧೈರ್ಯದಿಂದ ಪ್ರಶ್ನಿಸುವ ಮನೋಭಾವವನ್ನು ಬಾಲ್ಯದಿಂದಲೂ ರೂಢಿಸಿಕೊಂಡವಳು. ಇಲ್ಲಿನ ಸಾವಿತ್ರಿ ಸತಿಪದ್ಧತಿಯನ್ನು ವಿರೋಧಿಸುತ್ತಾಳೆ, ಮಹಿಳೆಯರ ಪರವಾಗಿ ದನಿ ಎತ್ತಿ, ಬ್ರಾಹ್ಮಣ ವಿಧವೆಯರಿಗೆ ಆಸರೆ ನೀಡಿ, ಅನಾಥ ಮಕ್ಕಳಿಗೆ ತಾಯಿಯಾಗುತ್ತಾಳೆ. ಅಗ್ರಹಾರದಲ್ಲಿ ಕರ್ಮಠ ಬ್ರಾಹ್ಮಣರೆಂದು ಪ್ರಸಿದ್ಧಿ ಪಡೆದಿದ್ದ ಗೋವಿಂದಭಟ್ಟರ ಮಗ ನರಸಿಂಹಭಟ್ಟ ತೀರಿಹೋಗಿದ್ದು ಅವನ ಅಂತ್ಯಕ್ರಿಯೆಯ ಜೊತೆಗೆ ಆತನ ಹೆಂಡತಿ ಆರು ವರ್ಷದ ಸರಸ್ವತಿಯನ್ನು ಚಿತೆಗೆ ಏರಿಸಿ ಸಹಗಮನ ಮಾಡಿಸಲಿದ್ದಾರೆ ಎಂದು ತಾಯಿ ಲಕ್ಷ್ಮೀಬಾಯಿ ಹೇಳಿದಾಗ, "ಅವಳ ಗಂಡ ಸತ್ತರೆ, ಇವಳನ್ನೇಕೆ ಚಿತೆಗೆ ಹಾಕಬೇಕು ? ಎಂದು ಸಾವಿತ್ರಿ ಪ್ರಶ್ನಿಸುತ್ತಾಳೆ.ಮುಂದುವರೆದು "ಆತ ಸತ್ತಿದ್ದಾನೆ, ಅವನನ್ನು ಸುಡಬೇಕು, ಅದು ನ್ಯಾಯ. ಆದರೆ ಸತ್ತವರ ಜೊತೆಗೆ ಜೀವಂತ ಇರುವವರನ್ನು ಸುಡುವುದು ಅದೆಂತಹ ನ್ಯಾಯ ?"[4] ಎಂದು ಸಾವಿತ್ರಿಬಾಯಿ ನಿರ್ಭೀಡೆಯಿಂದ ಪ್ರಶ್ನಿಸುತ್ತಾಳೆ. ಆ ಮೂಲಕ ಅಂದಿನ ಸಾಮಾಜಿಕ ವ್ಯವಸ್ಥೆ ಮತ್ತು ಅನಿಷ್ಟ ಪದ್ಧತಿಯ ವಿರುದ್ಧ ದನಿಯೆತ್ತುತ್ತಾಳೆ. ಸಾವಿತ್ರಿ ತನ್ನ ಗೆಳತಿಯರಾದ ತಾರಾಬಾಯಿ, ಚಂದ್ರಾಬಾಯಿ, ಮುಕ್ತಾಬಾಯಿ, ಮೀರಾಬಾಯಿಯ ಜೊತೆಗೂಡಿ ಜೀವಂತ ಸುಡಲು ಹೊರಟಿದ್ದ ಸರಸ್ವತಿಯನ್ನು ಸಹಗಮನ ಪದ್ಧತಿಯಿಂದ ಕಾಪಾಡಿದ್ದು ಸಾಹಸಮಯವಾಗಿದೆ.

ಸಾವಿತ್ರಿಬಾಯಿ ಫುಲೆ ಕಾದಂಬರಿಯ ಪ್ರತಿಯೊಂದು ಘಟನೆಯೂ ಕುತೂಹಲಕಾರಿಯಾಗಿದೆ. ಸಾವಿತ್ರಿಬಾಯಿ ಎಂಬ ಪಾತ್ರವೇ ಈ ಕಾದಂಬರಿಯ ಕೇಂದ್ರಬಿಂದು. ಆಕೆಯ ವ್ಯಕ್ತಿತ್ವದ ಉತ್ಕರ್ಷಕ್ಕೆ ಪೂರಕವಾದ ಪಾತ್ರಗಳು ಇಲ್ಲಿ ಸ್ಫುಟವಾಗಿ ಮೂಡಿಬಂದಿದೆ. ಸರಜೂ ಕಾಟ್ಕರ್ ಅವರು ಸಾವಿತ್ರಿಬಾಯಿಯ ಪಾತ್ರಕ್ಕೆ ಹೊಸ ರೂಪ ಹೊಸ ಸಂವೇದನೆಯನ್ನು ಸೃಷ್ಟಿಸಿದ್ದಾರೆ ಮತ್ತು ಪುರೋಹಿತಶಾಹಿಯ ವಿರುದ್ಧ ಸಿಡಿದೆದ್ದ, ವ್ಯವಸ್ಥೆಯನ್ನು ಪ್ರಶ್ನಿಸುವ, ಸಾಮಾಜಿಕ ರೀತಿ ರಿವಾಜುಗಳನ್ನು ಧಿಕ್ಕರಿಸುವ ಪಾತ್ರವಾಗಿದೆ. ಲೇಖಕರಾದ ಸರಜೂ ಕಾಟ್ಕರ್ ಅವರು ಚರಿತ್ರೆಯನ್ನು ಮುರಿದು ಕಟ್ಟಲಿಲ್ಲ, ಚರಿತ್ರೆಯ ಬುನಾದಿಯ ಮೇಲೆ ಧೀರೋದಾತ್ತೆ ಮಹಿಳೆಯನ್ನು ನಿರ್ಮಿಸಿ ಆಕೆಗೊಂದು ಸಾಮಾಜಿಕ ನ್ಯಾಯ ದೇವತೆಯ ರೂಪ ನೀಡಿದ್ದಾರೆ ಎಂದು ಹೇಳಬಹುದು.

ಸಾಮಾಜಿಕ ಅಸಮಾನತೆ, ಜಾತಿ ತಾರತಮ್ಯ, ಅಸ್ಪೃಶ್ಯತೆ, ಶೋಷಣೆ, ಸ್ತ್ರೀ ಶಿಕ್ಷಣದ ನಿಷೇಧ, ಬಾಲ್ಯವಿವಾಹ, ಸತಿಪದ್ಧತಿ, ವಿಧವಾ ಸಮಸ್ಯೆ ಮುಂತಾದ ಸಾಮಾಜಿಕ ಪಿಡುಗುಗಳನ್ನು ನಿವಾರಿಸುವ ಗುರಿಯನ್ನು ಹೊಂದಿದ್ದ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆಯವರ ಧ್ಯೇಯೋದ್ದೇಶದ ಹಿನ್ನೆಲೆಯಲ್ಲಿ ಈ ಕಾದಂಬರಿ ಮಹತ್ವದ ಸ್ಥಾನ ಪಡೆಯುತ್ತದೆ. ಸಾವಿತ್ರಿಬಾಯಿ ಫುಲೆ ಯಾವ ಸಂದರ್ಭದಲ್ಲಿಯೂ ಧೃತಿಗೆಡದೆ ತನ್ನ ಗುರಿ ಮತ್ತು ಉದ್ದೇಶಗಳ ಕಡೆಗೆ ಆತ್ಮಸ್ಥೈರ್ಯದಿಂದ ಮುನ್ನೆಡೆಯುತ್ತಾಳೆ. ಆ ಮೂಲಕ ಕಾದಂಬರಿಯಲ್ಲಿ ಸ್ತ್ರೀಪರ ಮತ್ತು ಜೀವಪರ ಕಾಳಜಿಗಳು ಪ್ರಮುಖವಾಗಿ ಮೂಡಿಬಂದಿದೆ.

ವ್ಯಕ್ತಿಯ ವ್ಯಕ್ತಿತ್ವ ರೂಪಿಸುವಲ್ಲಿ ಶಿಕ್ಷಣ ಬಹುಮುಖ್ಯ ಪಾತ್ರವಹಿಸುತ್ತದೆ. ಅದರಲ್ಲೂ ಸ್ತ್ರೀ ಶಿಕ್ಷಣ "ಕುಟುಂಬ ಮತ್ತು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ರೀತಿಯಲ್ಲಿರಬೇಕು".[5] ಎಂಬ ಮಾತಿಗೆ ಸಾವಿತ್ರಿಬಾಯಿ ಫುಲೆ ಪಾತ್ರಳಾಗಿರುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವುದರಿಂದ ಕುಟುಂಬ ನಾಶವಾಗುತ್ತದೆ ಎಂಬ ಮೂಢನಂಬಿಕೆಯನ್ನು ಹೋಗಲಾಡಿಸಲು ಸಮಾಜ ಸುಧಾರಣೆಯ ಅಗತ್ಯವಿದೆ ಎಂದು ಅರಿತ ಸಾವಿತ್ರಿಬಾಯಿ ಫುಲೆ ಮತ್ತು ಜ್ಯೋತಿಬಾ ಫುಲೆಯವರು ಸ್ತ್ರೀ ಶಿಕ್ಷಣಕ್ಕಾಗಿ ಅವಿರತ ದುಡಿದಿದ್ದಾರೆ ಹಾಗೂ ಸಮಾಜವನ್ನು ಸನಾತನಿಗಳ ಕಪಿಮುಷ್ಠಿಯಿಂದ, ವರ್ಣಾಶ್ರಮ ವ್ಯವಸ್ಥೆಯಿಂದ ಸಂಪೂರ್ಣವಾಗಿ ಮುಕ್ತಗೊಳಿಸಬೇಕೆಂದು ಬಯಸಿ ಅದಕ್ಕಾಗಿ ಶ್ರಮಿಸಿದರು ಎಂಬುದನ್ನು ಕಾದಂಬರಿಯು ಕಟ್ಟಿಕೊಟ್ಟಿದೆ.

ಸಾವಿತ್ರಿಬಾಯಿ ಫುಲೆ ಅವರನ್ನು ತರಬೇತಿ ಪಡೆದ ಮೊದಲ ಭಾರತೀಯ ಶಾಲಾ ಶಿಕ್ಷಕಿ ಎಂದು ಕರೆಯುತ್ತಾರೆ ನಂತರ 1948ರಲ್ಲಿ "ಭಾರತದ ಮೊಟ್ಟಮೊದಲ ಕನ್ಯಾಶಾಲೆ ಪುಣೆಯ ಬುಧವಾರ ಪೇಟೆಯಲ್ಲಿ ಭಿಡೆಯವರ ವಾಡೆಯಲ್ಲಿ ವಿದ್ಯುಕ್ತವಾಗಿ ಆರಂಭಗೊಂಡಿತು"[6] ಇದು ಸ್ತ್ರೀ ಶಿಕ್ಷಣಕ್ಕೆ ಫುಲೆಯವರು ಹಾಕಿದ ನಾಂದಿಯಾಗಿದೆ. ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆಯವರ ಈ ಕಾರ್ಯಕ್ಕೆ ಸಂಪ್ರದಾಯಸ್ಥ ಬ್ರಾಹ್ಮಣರು ವಿರೋಧಿಸುತ್ತಿದ್ದರೆ, ಜ್ಯೋತಿಬಾ ಫುಲೆ ಅವರ ಪ್ರಗತಿಪರರಾದ ಬ್ರಾಹ್ಮಣ ಗೆಳೆಯರು ನೀಡಿದ ಪ್ರೋತ್ಸಾಹ ಮತ್ತು ನೆರವನ್ನು ಈ ಕಾದಂಬರಿಯು ಕಟ್ಟಿಕೊಡುತ್ತದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪತಿಯಾದ ಜ್ಯೋತಿಬಾ ಫುಲೆಯವರೊಂದಿಗೆ ಸೇರಿ ಸಾವಿತ್ರಿಬಾಯಿ ಫುಲೆಯವರು ನಡೆಸಿದ ಹೋರಾಟದ ಹೆಜ್ಜೆಗಳನ್ನು ಸರಜೂ ಕಾಟ್ಕರ್ ಅವರು ಕಾದಂಬರಿಯಲ್ಲಿ ದಾಖಲಿಸಿದ್ದಾರೆ.

ಶಿಕ್ಷಣದ ಮಹತ್ವವನ್ನು ಕುರಿತು ಸಾವಿತ್ರಿಬಾಯಿ ಫುಲೆ "ನಿಮ್ಮ ಮಕ್ಕಳನ್ನೂ ಶಾಲೆಗೆ ಸೇರಿಸಿ, ಆ ಮೂಲಕ ಜ್ಞಾನದ ಬೆಳಕನ್ನು ಕಾಣಿರಿ" ಎಂದು ಹೇಳುವ ಮೂಲಕ ಜಾಗೃತಿ ಮೂಡಿಸುತ್ತಾಳೆ. ಹೀಗೆ ಶಿಕ್ಷಣದ ಬಗೆಗೆ ಅರಿವು ಮೂಡಿಸುತ್ತಿರುವುದರ ಕುರಿತು "ಪುಣೆಯಲ್ಲಿ ಒಬ್ಬ ಹಿಂದೂ ಮಹಿಳೆ ಬಾಲಕಿಯರಿಗೆ ಅಕ್ಷರಗಳನ್ನು ಕಲಿಸುತ್ತಾಳೆ" ಎಂಬ ಸುದ್ದಿಯನ್ನು ಲಂಡನ್ನಿನಿಂದ ಪ್ರಕಟವಾಗುತ್ತಿದ್ದ

'ಲಂಡನ್ ಟೈಮ್ಸ್' ಪತ್ರಿಕೆ ಪ್ರಕಟಿಸಿ 'ಭಾರತೀಯ ಹೆಣ್ಣು ಮಕ್ಕಳು ಶತಶತಮಾನಗಳ ದಾಸ್ಯತ್ವದ ನೊಗವನ್ನು ನಿರಾಕರಿಸುವ ಮೊದಲ ಹೆಜ್ಜೆಯತ್ತ ಸಾಗುತ್ತಿದ್ದಾರೆ"[7] ಎಂದು ಸಂಪಾದಕೀಯವನ್ನು ಬರೆಯಿತು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಸ್ತ್ರೀ ಶಿಕ್ಷಣದ ರೂವಾರಿಗಳಾದ ಫುಲೆ ದಂಪತಿಗಳು ಒಂದೇ ವರ್ಷದಲ್ಲಿ ದಲಿತರಿಗಾಗಿ, ದಮನಿತರಿಗಾಗಿ ಮತ್ತು ಶೂದ್ರರಿಗಾಗಿ ಐದು ಕಡೆಗಳಲ್ಲಿ ಶಾಲೆಗಳನ್ನು ಆರಂಭಿಸಿದರು. ಜೊತೆಗೆ ದೀನ ದಲಿತರ ಮಕ್ಕಳಿಗೆ ಶಿಕ್ಷಣದ ಜೊತೆಗೆ ಹಸಿವನ್ನು ನೀಗಿಸುವ ಕಾರ್ಯದಲ್ಲಿ ತೊಡಗುತ್ತಾರೆ. ಸಾವಿತ್ರಿಬಾಯಿ ಫುಲೆ ಎಲ್ಲಾ ಮಕ್ಕಳ ತಾಯಿಯಾಗಿ, ತಾನು ಬದುಕಿರುವವರೆಗೂ ಸಮಾಜ ಸೇವೆಯಲ್ಲಿ ತೊಡಗಿ ಮಹಾಮಾತೆ ಎನಿಸಿಕೊಂಡಿರುವುದರ ಕುರಿತು ಕಾದಂಬರಿಯು ಬೆಳಕು ಚೆಲ್ಲುತ್ತದೆ. ಸಾವಿತ್ರಿಬಾಯಿ ಶೈಕ್ಷಣಿಕ ಕಾರ್ಯವನ್ನು ಪುರೋಹಿತಶಾಹಿಗಳು ವಿರೋಧಿಸಿದರು ಆದರೆ ಆಂಗ್ಲರು ಮೆಚ್ಚಿ ಪ್ರೋತ್ಸಾಹಿಸುತ್ತಿದ್ದರು. ವಿದೇಶಿ ಆಂಗ್ಲ ಪತ್ರಿಕೆಗಳೂ ಸಾವಿತ್ರಿಯ ಬಗೆಗೆ ಅವಳ ಕಾರ್ಯಸಾಧನೆಯ ಬಗೆಗೆ, ಸಾಮಾಜಿಕ ಕಳಕಳಿಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತವೆ. ಇಂತಹ ಹಲವು ಸನ್ನಿವೇಶಗಳನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಜ್ಯೋತಿಬಾ ಫುಲೆಯವರಿಗೆ 'ಮಹಾತ್ಮ' ಎಂಬ ಬಿರುದು ನೀಡಿ ಗೌರವಿಸಿದಾಗ "ನಿಜವಾಗಿಯೂ ಸತ್ಕಾರ–ಸಮ್ಮಾನ ನಿನಗೆ ದೊರೆಯಬೇಕು, ಪಾಠಶಾಲೆಗಳನ್ನು ನಾಮಮಾತ್ರಕ್ಕೆ ನಾನು ಶುರು ಮಾಡಿದವನು. ಎಲ್ಲ ಸಂಕಷ್ಟಗಳನ್ನು ಅಡ್ಡಿ ಆತಂಕಗಳನ್ನು ಎದುರಿಸಿ ನೀನೇ ಪಾಠ ಶಾಲೆಗಳನ್ನು ಸಂಚಾಲಿಸಿದ್ದೀಯಾ. ನಿನ್ನ ಸೇವಾ ಭಾವನೆ ಬಗ್ಗೆ ನನಗೆ ಹೆಮ್ಮೆಯಾಗುತ್ತದೆ".[8] ಎಂದು ಜ್ಯೋತಿಬಾ ಫುಲೆ ಹೇಳಿದ ಮಾತು ಸಾವಿತ್ರಿಬಾಯಿ ಫುಲೆಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ಪತಿಯ ಎಲ್ಲಾ ಸತ್ಕಾರ್ಯಕ್ಕೆ ಪತ್ನಿ, ಪತ್ನಿಯ ಎಲ್ಲಾ ಸಾಮಾಜಿಕ ಕಾರ್ಯಗಳಲ್ಲಿ ಪತಿ ಪರಸ್ಪರ ಸಹಕಾರಿಯಾಗಿ ಹೆಜ್ಜೆಯಿಟ್ಟಿರುವುದನ್ನು ಇಲ್ಲಿ ಗಮನಿಸಬಹುದು. ಈ ಕಾದಂಬರಿಯಲ್ಲಿ ಜ್ಯೋತಿಬಾ ಫುಲೆಯ ಅಂತಿಮ ಕಾಲದ ದಾರುಣ ಪ್ರಸಂಗ ಮನಕಲಕುವ ಹಾಗೆ ಮೂಡಿಬಂದಿದೆ. ಪಾರ್ಶ್ವವಾಯುವಿನಿಂದ ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆ ಹಿಡಿದ ಫುಲೆಯವರನ್ನು ಆರೈಕೆ ಮಾಡುವಾಗ, ಧೈರ್ಯ ತುಂಬುವಾಗ ಸಾವಿತ್ರಿಬಾಯಿ ತೋರಿದ ಧೈರ್ಯ ನಿಜಕ್ಕೂ ಮೆಚ್ಚುವಂತಹದ್ದು.

ಜ್ಯೋತಿಬಾ ಫುಲೆಯವರಿಂದ ಅಕ್ಷರ ಕಲಿತ ಸಾವಿತ್ರಿಬಾಯಿ ಮುಂದೆ ಸನಾತನಿಗಳಿಂದ ಸಗಣಿ ಎರಚುವ ಪ್ರಸಂಗ, ಶಾಲೆಗಳ ಆರಂಭ, ಕ್ಷೌರಿಕರ ಪ್ರಸಂಗ, ವಿಧವಾ ಹೆರಿಗೆ ಗೃಹ ಇದಕ್ಕೆಲ್ಲ ತನಗೆ ಬೆಂಬಲವಾಗಿ ನಿಂತ ಪತಿಯ ಸಾವಿನ ನಂತರವು ಧೃತಿಗೆಡುವುದಿಲ್ಲ. ಪತಿಯ ಸಾವಿನ ನಂತರವು ಸತ್ಯಶೋಧಕ ಸಮಾಜದ ಕಾರ್ಯವನ್ನು ಸಾವಿತ್ರಿಬಾಯಿ ಮುನ್ನಡೆಸಿಕೊಂಡು ಹೋಗುತ್ತಾರೆ. ಆ ಎಲ್ಲಾ ಸಂದರ್ಭಗಳನ್ನು ಸರಜೂ ಕಾಟ್ಕರ್ ಸಮಯೋಚಿತ ಸನ್ನಿವೇಶಗಳೊಂದಿಗೆ ಚಿತ್ರಿಸಿದ್ದಾರೆ.

ಸಾವಿತ್ರಿಬಾಯಿಯವರ ಸಾಮಾಜಿಕ ಕಾರ್ಯಗಳಲ್ಲಿ ಮುಖ್ಯವಾದದ್ದು ಪುಣೆಯಲ್ಲಿ ಬರಗಾಲ ಮತ್ತು ಪ್ಲೇಗ್ ಉಂಟಾದಾಗ ದಲಿತ ರೋಗಿಗಳ ಸೇವೆಯಲ್ಲಿ ಹಗಲು ರಾತ್ರಿ ಶ್ರಮಿಸಿದ್ದು. ಕೊನೆಗೆ ಪ್ಲೇಗ್ ಮಹಾಮಾರಿಯೇ ಆಕೆಯನ್ನು ಬಲಿ ತೆಗೆದುಕೊಳ್ಳುತ್ತದೆ.

ಕಾದಂಬರಿಯ ಕೊನೆಯ ಕೆಲವು ಪ್ರಸಂಗಗಳು ತುಂಬ ಮಾರ್ಮಿಕವಾಗಿ ಹೃದಯವನ್ನು ಕಲಕುವಷ್ಟು ವಾಸ್ತವವಾಗಿ ಮೂಡಿಬಂದಿದೆ. ಸಾವಿತ್ರಿಯ ದಾರುಣ ಸಾವಿನೊಂದಿಗೆ ಕಾದಂಬರಿ ಅಂತ್ಯಗೊಳ್ಳುತ್ತದೆಯಾದರೂ ಅನುಬಂಧದಲ್ಲಿ ತಿಳಿಸಿರುವ ಹಾಗೆ ಸಾವಿತ್ರಿಬಾಯಿಯ ಸಾವಿನ ಕೆಲವು ದಿನಗಳ ನಂತರ ಮಗ ಯಶವಂತನೂ ನಿಧನನಾಗುತ್ತಾನೆ. ಆತನ ಪತ್ನಿ ಮತ್ತು ಹೆಂಡತಿ ಸಂಕಷ್ಟಕ್ಕೆ ಸಿಲುಕಿ, ಹಸಿವು ನೀಗಿಸಲು ಮತ್ತು ಜೀವನ ಸಾಗಿಸಲು ಜ್ಯೋತಿಬಾ ಅವರು ಬರೆದ ಮತ್ತು ಸಂಗ್ರಹಿಸಿದ ಪುಸ್ತಕ, ಮನೆ, ಸಾಮಾಗ್ರಿಗಳನ್ನೆಲ್ಲ ಮಾರುತ್ತಾರೆ ಎಂಬುದನ್ನು ಲೇಖಕರಾದ ಸರಜೂ ಕಾಟ್ಕರ್ ದಾಖಲಿಸಿದ್ದಾರೆ. ಕಾದಂಬರಿಯಲ್ಲಿ ಸಾವಿತ್ರಿಬಾಯಿಯ ವ್ಯಕ್ತಿತ್ವಕ್ಕೆ ಪೂರಕವಾಗಿ ಜ್ಯೋತಿಬಾ ಫುಲೆ, ಖಂಡೋಜಿ, ಲಕ್ಷ್ಮೀಬಾಯಿ, ಸಗುಣಬಾಯಿ, ತಾರಾಬಾಯಿ, ಚಂದ್ರಾಬಾಯಿ, ಮುಕ್ತಾಬಾಯಿ, ಮೀರಾಬಾಯಿ, ಫಾತಿಮಾ ಶೇಖ್, ಯಶವಂತ, ಲಕ್ಷ್ಮೀ ಓದುಗರ ಮನಸ್ಸಿನಲ್ಲಿ ಉಳಿಯುವಂತಹ ಪಾತ್ರಗಳು. ಹಾಗೆ ಕಾದಂಬರಿ ಆರಂಭದಿಂದ ಕೊನೆಯವರೆಗೂ ಓದುಗರ ಮನಸ್ಸನ್ನು ಹಿಡಿದಿಟ್ಟುಕೊಳ್ಳುತ್ತದೆ.

ಸರಜೂ ಕಾಟ್ಕರ್ ಅವರು 'ಸಾವಿತ್ರಿಬಾಯಿ ಫುಲೆ' ಎಂಬ ಕೃತಿ ರಚನೆ ಮಾಡಲು ಸಾಕಷ್ಟು ಶ್ರಮಪಟ್ಟಿದ್ದಾರೆ. ಅದಕ್ಕಾಗಿ ಆರು ಮರಾಠಿ ಕೃತಿ, ಒಂದು ಕನ್ನಡ ಮತ್ತು ಒಂದು ಇಂಗ್ಲಿಷ್ ಕೃತಿ ಸೇರಿದಂತೆ ಒಟ್ಟು ಎಂಟು ಕೃತಿಗಳನ್ನು ಓದಿ, ಪರಿಶೋಧಿಸಿ, ಚರಿತ್ರೆಯನ್ನು ಮತ್ತೆ ಹೊಸದಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿರುವುದು ಶ್ಲಾಘನೀಯ. ಸಾವಿತ್ರಿಬಾಯಿ ಜೀವನ, ವ್ಯಕ್ತಿತ್ವ, ಸಾಧನೆಯ ಬಗ್ಗೆ ತಿಳಿಯ ಬಯಸುವವರಿಗೆ ಈ ಕಾದಂಬರಿ ತುಂಬಾ ಉಪಯುಕ್ತವಾಗಿದೆ. ಇಂಥದೊಂದು ಕಾದಂಬರಿಯನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ ಸರಜೂ ಕಾಟ್ಕರ್ ಅವರ ಶ್ರಮ ಶ್ಲಾಘನೀಯ. ಸರಜೂ ಕಾಟ್ಕರ್ ಅವರ 'ಸಾವಿತ್ರಿಬಾಯಿ ಫುಲೆ' ಕಾದಂಬರಿ ಆಧಾರಿತ ಚಲನಚಿತ್ರ ವಿಶಾಲ್ ರಾಜ್ ಅವರ ನಿರ್ದೇಶನದಲ್ಲಿ 2018ರಲ್ಲಿ ತೆರೆಕಂಡಿದೆ. ಸಾವಿತ್ರಿಬಾಯಿ ಫುಲೆ ಅವರ ಪಾತ್ರವನ್ನು ತಾರಾ, ಜ್ಯೋತಿಬಾ ಫುಲೆ ಅವರ ಪಾತ್ರವನ್ನು ಸುಚೇಂದ್ರ ಪ್ರಸಾದ್ ನಿರ್ವಹಿಸಿದ್ದಾರೆ. 2018ರ ರಾಜ್ಯ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಒಟ್ಟಾರೆ 'ಸಾವಿತ್ರಿಬಾಯಿ ಫುಲೆ' ಕಾದಂಬರಿ ಕನ್ನಡ ಸಾಹಿತ್ಯದ ಮಹತ್ವವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

**ಆಕರ ಗ್ರಂಥ :**

1. ಸಾವಿತ್ರಿಬಾಯಿ ಫುಲೆ, ಸರಜೂ ಕಾಟ್ಕರ್, ಯಾಜಿ ಪ್ರಕಾಶನ, ಹೊಸಪೇಟೆ, ಬಳ್ಳಾರಿ, 2016.

**ಕೊನೆ ಟಿಪ್ಪಣಿಗಳು :**

೧. ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ, ಚಿಕ್ಕಮಗಳೂರು ಗಣೇಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, 2021, ಪುಟ–20

೨. ಸಾವಿತ್ರಿಬಾಯಿ ಫುಲೆ,ಸರಜೂ ಕಾಟ್ಕರ್,ಯಾಜಿ ಪ್ರಕಾಶನ,ಹೊಸಪೇಟೆ,ಬಳ್ಳಾರಿ,2016.ಪುಟ–7

೩. ಅದೇ, ಪುಟ–7

೪. ಸಾವಿತ್ರಿಬಾಯಿಫುಲೆ,ಸರಜೂ ಕಾಟ್ಕರ್,ಯಾಜಿ ಪ್ರಕಾಶನ,ಹೊಸಪೇಟೆ,ಬಳ್ಳಾರಿ,2016. ಪುಟ–3

೫. ಸ್ತ್ರೀ ವಿಮುಕ್ತಿ ಚಿಂತನೆ : ಒಂದು ಅಧ್ಯಯನ, ಗೀತಾ ಶೆಣೈ, ಕರ್ನಾಟಕ ರಾಜ್ಯ ಲೇಖಕಿಯರ ಸಂಘ, ಬೆಂಗಳೂರು, 2007,ಪುಟ–35

೬. ಸಾವಿತ್ರಿಬಾಯಿಫುಲೆ,ಸರಜೂ ಕಾಟ್ಕರ್,ಯಾಜಿ ಪ್ರಕಾಶನ,ಹೊಸಪೇಟೆ,ಬಳ್ಳಾರಿ,2016.ಪುಟ–65

೭. ಅದೇ, ಪುಟ–67

೮. ಅದೇ, ಪುಟ–48

೯. ಸುಧಾರಕ ಮಹಾತ್ಮ ಫುಲೆ, ಮುರಳೀಧರ ಜಗತಾಪ, ನವಕರ್ನಾಟಕ ಪ್ರಕಾಶನ, ಬೆಂಗಳೂರು. 2013.

೧೦. ಸಮತಾ ಪಂಜು, ಕುಪ್ನಳ್ಳಿ ಎಂ.ಭೈರಪ್ಪ, ಹೇಮಲತ ಪಿ.ಎನ್, ಉಷಾ ಪ್ರಕಾಶನ, ಮೈಸೂರು, 2015.